ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **486**

ಸದಸ್ಯರ ಹೆಸರು : ಶ್ರೀ ಸುನೀಲ್ ಸುಬ್ರಮಣಿ ಎಂ. ಪಿ.
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 05-02-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ವಾಹನಗಳಲ್ಲಿ ಯಾವ ರೀತಿಯ ದೀಪಗಳನ್ನು ಅಳವಡಿಸಬೇಕು ಎಂಬುದಕ್ಕೆ ಸರ್ಕಾರಿ ಆದೇಶವೇನಾದರೂ ಇದೆಯೇ; ಇದ್ದಲ್ಲಿ, ಅದರ ಆದೇಶದ ಪ್ರತಿಯನ್ನು ಒದಗಿಸುವುದು;	ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 105ರಡಿ (ನಿಯಮದ ಪ್ರತಿ ಲಗತ್ತಿಸಿದೆ) ನಿಗದಿಪಡಿಸಿರುವಂತೆ ಸಾರ್ವಜನಿಕ ರಸ್ತೆಯ ಮೇಲೆ ಚಲಾಯಿಸುವಂತಹ ಯಾವುದೇ ವಾಹನವು ಸೂರ್ಯಾಸ್ತದ ಅರ್ಧ ತಾಸಿನ ನಂತರ ಮತ್ತು ಸಾಕಷ್ಟು ಬೆಳಕು ಇಲ್ಲದ ಯಾವುದೇ ಸಂದರ್ಭಗಳಲ್ಲಿ 155 ಮೀಟರ್‌ಗಳ ವ್ಯಾಪ್ತಿಯಷ್ಟು ಬೆಳಕನ್ನು ಹೊರ ಸೂಸುವ ಮತ್ತು ರಸ್ತೆಯ ಮೇಲೆ ಸಂಚರಿಸುವ ವಾಹನ ಮತ್ತು ವ್ಯಕ್ತಿಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವಂತಹ ಹೆಡ್‌ಲೈಟ್ (ಲ್ಯಾಂಪ್)ಗಳನ್ನು ವಿವಿಧ ವರ್ಗದ ವಾಹನಗಳಿಗೆ ಅಳವಡಿಸಿರಬೇಕಾಗುತ್ತದೆ ಹಾಗೂ ಸದರಿ ನಿಯಮದ ಉಪ ನಿಯಮ (2)ರಲ್ಲಿ ಇತರೆ ಉಪಬಂಧಗಳನ್ನು ನಿಗದಿಪಡಿಸಲಾಗಿದೆ. ವಾಹನಗಳಲ್ಲಿ ಪ್ರಜ್ವಲಿಸುವ ದೀಪಗಳನ್ನು (ಹೆಡ್‌ಲೈಟ್) ಉಪಯೋಗಿಸುವುದರಿಂದ ವಿರುದ್ಧ ದಿಕ್ಕಿನಿಂದ ಬರುವ ವಾಹನಗಳ ಚಾಲಕರುಗಳಿಗೆ ಅನಾನುಕೂಲವಾಗಿ ಅಪಘಾತಗಳಾಗುವ ಸಂಭವವಿರುವ ಪ್ರಯುಕ್ತ ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಸುರಕ್ಷತೆಯ ಸಲುವಾಗಿ ವಾಹನಗಳಲ್ಲಿ ಪ್ರಜ್ವಲಿಸುವ ದೀಪಗಳನ್ನು (ಹೆಡ್‌ಲೈಟ್) ಉಪಯೋಗಿಸುವುದನ್ನು ನಿರ್ಬಂಧಿಸಿ, ಲೋಬೀಮ್ ಲೈಟ್‌ಗಳನ್ನು ಮಾತ್ರ ಉಪಯೋಗಿಸಿ ವಾಹನ ಚಾಲನೆ ಮಾಡುವಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತರು ಸಂಖ್ಯೆ: 631/ಸಂ.ವಿ/ಸಿ.ಓ.ಪಿ/2003, ದಿನಾಂಕ:07-11-2003 ರಲ್ಲಿ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ. **(ಪ್ರತಿ ಲಗತ್ತಿಸಿದೆ)**.
ಆ	ವಾಹನಗಳಲ್ಲಿ ಪ್ರಖರವಾದ ಎಲ್.ಇ.ಡಿ. ದೀಪಗಳನ್ನು ಅಳವಡಿಸಲು ಅವಕಾಶವಿದೆಯೇ; ಇದ್ದಲ್ಲಿ, ಅದರ ಮಾಹಿತಿಯನ್ನು ನೀಡುವುದು;	ವಾಹನಗಳಲ್ಲಿ ಪ್ರಖರವಾದ ಎಲ್.ಇ.ಡಿ. ದೀಪಗಳನ್ನು ಅಳವಡಿಸಲು ಅವಕಾಶವಿರುವುದಿಲ್ಲ.

ಇ	ಪ್ರಖರವಾದ ಮತ್ತು ಕಣ್ಣು ಚುಚ್ಚುವ ಎಲ್.ಇ.ಡಿ. ದೀಪಗಳನ್ನು ಅಳವಡಿಸಿ ಕೊಂಡಿರುವ ವಾಹನಗಳಿಂದ ಬೇರೆ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದು ಮತ್ತು ಅಪಘಾತಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರದ ಕ್ರಮಗಳೇನು? (ವಿವರ ನೀಡುವುದು)	ಬಂದಿರುತ್ತದೆ. ಈ ಬಗ್ಗೆ ಪೊಲೀಸ್ ಇಲಾಖೆಯು ಕೈಗೊಂಡಿರುವ ಕ್ರಮದ ಮಾಹಿತಿ ಈ ಕೆಳಕಂಡಂತಿದೆ: ಪ್ರಜ್ವಲಿಸುವ ದೀಪಗಳನ್ನು (ಹೆಡ್‌ಲೈಟ್) ಉಪಯೋಗಿಸಿ ನಿಯಮ ಉಲ್ಲಂಘಿಸಿದ ವಾಹನ ಚಾಲಕ/ಸವಾರರ ವಿರುದ್ಧ ಕೇಂದ್ರ ಮೋಟಾರು ವಾಹನಗಳ ನಿಯಮ 106 ಸಹಿತ ಮೋಟಾರು ವಾಹನಗಳ ಕಾಯ್ದೆ ಕಲಂ 177 ರೀತ್ಯಾ ಕಳೆದ 5 ವರ್ಷಗಳಲ್ಲಿ ರಾಜ್ಯಾದ್ಯಂತ ದಾಖಲಿಸಿರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ:

ವರ್ಷಗಳು	ಪ್ರಜ್ವಲಿಸುವ ದೀಪಗಳನ್ನು (ಹೆಡ್‌ಲೈಟ್) ಉಪಯೋಗಿಸುವ ವಾಹನಗಳ ವಿರುದ್ಧ ರಾಜ್ಯಾದ್ಯಂತ ದಾಖಲಿಸಿದ ಪ್ರಕರಣಗಳ ಸಂಖ್ಯೆ
2016	30074
2017	28616
2018	13686
2019	7414
2020	1071

ಟಿಡಿ 15 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಪೊಲೀಸ್ ಕಮೀಷನರ್‌ರವರ ಕಛೇರಿ, ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ನಗರ

ಅಧಿಸೂಚನೆ

ಸಂಖ್ಯೆ: 631/ಸಂ.ವಿ/ಸಿ.ಓ.ಪಿ/2003, ದಿನಾಂಕ: 7ನೇ ನವೆಂಬರ್ 2003

ಬೆಂಗಳೂರು ನಗರದ ಬಹಳಷ್ಟು ರಸ್ತೆಗಳಲ್ಲಿ ಸಾಕಷ್ಟು ಪ್ರಕಾಶಮಾನವಾದ ಬೀದಿ ದೀಪಗಳಿದ್ದು ರಾತ್ರಿ ವೇಳೆಯಲ್ಲಿ ವಾಹನಗಳ ಹೆಡ್ ಲೈಟ್‌ಗಳನ್ನು ಉಪಯೋಗಿಸುವುದು ಅನಾವಶ್ಯಕವೆಂದು ಕಂಡುಬಂದಿದ್ದರಿಂದ ಹಾಗೂ ವಾಹನಗಳ ಹೆಡ್ ಲೈಟ್ ಉಪಯೋಗಿಸುವುದರಿಂದ ವಿರುದ್ಧ ದಿಕ್ಕಿನಿಂದ ಬರುವ ವಾಹನಗಳ ಚಾಲಕರುಗಳಿಗೆ ಅನಾನುಕೂಲವಾಗಿ ಅಪಘಾತಗಳಾಗುವ ಸಂಭವವಿದ್ದ ಪ್ರಯುಕ್ತ ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಸುರಕ್ಷತೆಯ ಸಲುವಾಗಿ ಬೆಂಗಳೂರು ನಗರದ ಈ ಕೆಳಕಂಡ ರಸ್ತೆಗಳಲ್ಲಿ ವಾಹನಗಳ ಹೆಡ್ ಲೈಟ್‌ಗಳನ್ನು ಉಪಯೋಗಿಸುವುದನ್ನು ನಿರ್ಬಂಧಿಸಲಾಗಿತ್ತು.

1)	ಏರ್‌ಪೋರ್ಟ್ ರಸ್ತೆ	-	ಏರ್ ಪೋರ್ಟ್ ನಿಂದ ಟ್ರಿನಿಟಿ ಚರ್ಚ್ ವೃತ್ತದವರೆಗೆ.
2)	ಎಂ.ಜಿ. ರಸ್ತೆ	-	ಟ್ರಿನಿಟಿ ಚರ್ಚ್ ವೃತ್ತದಿಂದ ಕ್ವೀನ್ ಸ್ಟಾಚ್ಯೂ ವೃತ್ತದವರೆಗೆ.
3)	ಕೆ.ಹೆಚ್. ರಸ್ತೆ	-	ದಲಾಲ್ ಪೆಟ್ರೋಲ್ ಬಂಕ್‌ನಿಂದ ಲಾಲ್‌ಬಾಗ್ ವೃತ್ತದವರೆಗೆ.
4)	ಟ್ಯಾಂಕ್ ಬಂಡ್ ರಸ್ತೆ	-	ಉಪ್ಪಾರಪೇಟೆ ಪೊಲೀಸ್ ಸ್ಟೇಷನ್‌ನಿಂದ ಗ್ರೇಡ್ ಸೆಪರೇಟಿಂಗ್ ಸೇತುವೆ.
5)	ಟಿ. ಚೌಡಯ್ಯ ರಸ್ತೆ	-	ರಾಜಭವನ ಜಂಕ್ಷನ್‌ನಿಂದ ಕಾವೇರಿ ಚಿತ್ರಮಂದಿರದ ಜಂಕ್ಷನ್‌ವರೆಗೆ.
6)	ಬಳ್ಳಾರಿ ರಸ್ತೆ	-	ಕಾವೇರಿ ಚಿತ್ರಮಂದಿರ ಜಂಕ್ಷನ್‌ನಿಂದ ಮೇಖ್ರಿ ವೃತ್ತದವರೆಗೆ.
7)	ಹಳೇ ತುಮಕೂರು ರಸ್ತೆ	-	ಮೇಖ್ರಿ ವೃತ್ತದಿಂದ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ವರೆಗೆ.
8)	ಕಬ್ಬನ್ ರಸ್ತೆ	-	ಸಿ.ಟಿ.ಓ ವೃತ್ತದಿಂದ ಡಿಕನ್ಸನ್ ರಸ್ತೆ ಜಂಕ್ಷನ್‌ವರೆಗೆ.
9)	ಆರ್.ವಿ. ರಸ್ತೆ	-	ಲಾಲ್ ಬಾಗ್ ಪಶ್ಚಿಮ ದ್ವಾರದಿಂದ ಸೌತ್ ಎಂಡ್ ಸರ್ಕಲ್‌ವರೆಗೆ.
10)	ಜೆ.ಸಿ. ರಸ್ತೆ	-	ಮಿನರ್ವ ವೃತ್ತದಿಂದ ನರಸಿಂಹರಾಜ ಚೌಕದವರೆಗೆ.

11) ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಸುತ್ತಲೂ, 9ನೇ ಮುಖ್ಯ ರಸ್ತೆ, 30ನೇ ಕ್ರಾಸ್ ಪವಿತ್ರ ಹೋಟೆಲ್ ಜಂಕ್ಷನ್‌ನಿಂದ ಕೆನರಾ ಬ್ಯಾಂಕ್ ವೃತ್ತದವರೆಗೆ.

ಆದರೆ ಇದನ್ನು ಪ್ರಾಯೋಗಿಕವಾಗಿ ಕಾರ್ಯರೂಪಕ್ಕೆ ತಂದು ನೋಡಿದಾಗ ರಸ್ತೆಗಳಲ್ಲಿ ಅನೇಕ ಕಡೆ ಮರ ಮುಂತಾದವು ಹೆಚ್ಚಾಗಿದ್ದು ಅವುಗಳ ನೆರಳಿನಿಂದ ಬೆಳಕು ಮಂದವಾಗಿರುವುದರಿಂದ ವಾಹನಗಳನ್ನು ಚಾಲನೆ ಮಾಡುವುದು ಕಷ್ಟಸಾಧ್ಯವಾಗಿರುವುದು ಕಂಡು ಬಂತು.

ಹೆಚ್ಚಿನ ಅಧ್ಯಯನದಿಂದ ರಸ್ತೆಗಳಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಲೋಬೀಮ್ ಲೈಟ್‌ಗಳನ್ನು ಉಪಯೋಗಿಸುವುದು ಅನಿವಾರ್ಯವಾಗಿರುತ್ತದೆಂಬುದು ಕಂಡುಬಂದಿದೆ.

ಆದ್ದರಿಂದ ವಾಹನಗಳ ಹೆಡ್ ಲೈಟ್‌ಗಳನ್ನು ಉಪಯೋಗಿಸಿ ಚಾಲನೆ ಮಾಡುವುದನ್ನು ನಿರ್ಬಂಧಿಸಿ ದಿನಾಂಕ 20-9-2003ರಂದು ಹೊರಡಿಸಲಾಗಿದ್ದ ಅಧಿಸೂಚನೆಯನ್ನು ರದ್ದುಪಡಿಸಿ ಕಲಂ 115 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 3 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್ 1960ರ ಪ್ರಕಾರ ನನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಅಧಿಕಾರವನ್ನು ಚಲಾಯಿಸಿ, ಎಸ್. ಮರಿಸ್ವಾಮಿ, ಐ.ಪಿ.ಎಸ್. ಪೊಲೀಸ್ ಕಮಿಷನರ್, ಬೆಂಗಳೂರು ನಗರ ಆದ ನಾನು ಇಡೀ ಬೆಂಗಳೂರು ನಗರದ ರಸ್ತೆಗಳಲ್ಲಿ ಲೋಬೀಮ್ ಲೈಟ್‌ಗಳನ್ನು ಮಾತ್ರ ಉಪಯೋಗಿಸಿ ವಾಹನ ಚಾಲನೆ ಮಾಡುವಂತೆ ಆದೇಶಿಸಿರುತ್ತೇನೆ.

ಅಂತೆಯೇ ಕಲಂ 116 ಮೋಟಾರು ವಾಹನ ಕಾಯ್ದೆ 1988 ಹಾಗೂ ಕಲಂ 4 ಕರ್ನಾಟಕ ಟ್ರಾಫಿಕ್ ಕಂಟ್ರೋಲ್ ಆಕ್ಟ್, 1960ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲ್ಕಂಡ ಆದೇಶಗಳನ್ನು ಜಾರಿಗೊಳಿಸಲು ಬೇಕಾದ ಅಗತ್ಯ ಸೂಚನಾ ಫಲಕಗಳನ್ನು ಸೂಕ್ತ ಸ್ಥಳಗಳಲ್ಲಿ ಅಳವಡಿಸಲು ಆದೇಶಿಸಿರುತ್ತೇನೆ.

ಈ ಮೇಲ್ಕಂಡ ಆದೇಶವು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೊಳಿಸುವುದು.

ಈ ಆದೇಶವನ್ನು ನಾನು ದಿನಾಂಕ 7-11-2003 ರಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ಹೊರಡಿಸಿರುತ್ತೇನೆ.

ಎಸ್. ಮರಿಸ್ವಾಮಿ

ಪೊಲೀಸ್ ಕಮೀಷನರ್, ಬೆಂಗಳೂರು ನಗರ

ಪಿ.ಆರ್. 4

ಕರ್ನಾಟಕ ವಿಧಾನ ಪರಿಷತ್ತು

ಶ್ರೀ ಬಿ.ಕೆ ಹರಿಪ್ರಸಾದ್, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರ ಉತ್ತರ

ವಿಷಯ:-

ಬೆಂಗಳೂರಿನಲ್ಲಿರುವ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ವ್ಯಾಪಕ ಭ್ರಷ್ಟಾಚಾರ ಮಧ್ಯವರ್ತಿಗಳ ಹಾವಳಿ ಹಿನ್ನೆಲೆಯಲ್ಲಿ ಆಗಾಗ್ಗೆ ಭ್ರಷ್ಟಾಚಾರ ನಿಗ್ರಹ ದಳದಿಂದ ದಾಳಿ ನಡೆಯುತ್ತಿರುವುದ್ನು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

ಹೊಸ ಆರ್.ಸಿ ಪುಸ್ತಕ, ಸ್ಮಾರ್ಟ್ ಕಾರ್ಡ್, ಡಿ.ಎಲ್, ಪರ್ಮಿಟ್ ಸೇರಿದಂತೆ ಇನ್ನಿತರೆ ದಾಖಲೆಗಳನ್ನು ಮಧ್ಯವರ್ತಿಗಳು, ಏಜೆಂಟರ ಕಛೇರಿ, ಮಳಿಗೆಗಳಲ್ಲಿ ಪತ್ತೆಯಾಗಿವೆ. ನೂರಾರು ದಾಖಲೆಗಳು ಅಲ್ಲಿ ಹೇಗೆ ಹೋದವು ಎಂಬುದರ ಬಗ್ಗೆ ಈಗಾಗಲೇ ಎಸಿಬಿಯಿಂದ ನೋಟಿಸ್ ನೀಡಿರುವುದು ತಿಳಿದುಬಂದಿದೆ.

ಲಂಚ ಇಲ್ಲದೆ ಯಾವುದೇ ಕೆಲಸಗಳು ಆಗುವುದಿಲ್ಲ ಎಂದು ಬಹಳಷ್ಟು ಜನ ದೂರ ಕೊಟ್ಟ ಹಿನ್ನೆಲೆಯಲ್ಲಿ ಈ ದಳಿಗಳು ನಡೆಯುತ್ತಿರುವುದು ವರದಿಯಾಗಿದೆ. ಸರ್ಕಾರ ಆನ್ ಲೈನ್ ಮೂಲಕ ಸೇವೆಗಳನ್ನು ನೋಂದಾಯಿಸಿಕೊಳ್ಳು ಅವಕಾಶ ನೀಡಿದ್ದರೂ ಸಹ ಮಾಹಿತಿ ಇಲ್ಲದವರು ಅಥವಾ ಆನ್ ಲೈನ್‌ನಲ್ಲಿ ಪ್ರಯತ್ನಿಸಿ ಅರ್ಜಿ ಹಾಕಲು ಸಾಧ್ಯವಾಗದವರು ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ಹೋದ ಸಂದರ್ಭದಲ್ಲಿ ಮಧ್ಯವರ್ತಿಗಳು ಇವರನ್ನು ಆವರಿಸಿಕೊಂಡು ಸಾರಿಗೆ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಭ್ರಷ್ಟಾಚಾರದಲ್ಲಿ ತೊಡಗಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ಮಧ್ಯವರ್ತಿಗಳಿಗೆ ಏಜೆಂಟರುಗಳಿಗೆ ಹಣ ನೀಡದೆ ಇದ್ದರೆ ಯಾವುದೇ ಕೆಲಸ ಆಗುವುದಿಲ್ಲ ಎನ್ನುವ ಮಾತು ಆರ್.ಟಿ.ಒ ಕಛೇರಿಗಳಲ್ಲಿ ಜಗಜಾಹೀರಾಗಿದೆ.

ಆದಕಾರಣ, ಈ ವಿಷಯದ ಬಗ್ಗೆ ಮಾನ್ಯ ಸಾರಿಗೆ ಸಚಿವರು ಕೂಡಲೇ ಗಮನಹರಿಸಿ ಪಾರದರ್ಶಕ ರೀತಿಯಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಗಳು ಕಾರ್ಯನಿರ್ವಹಿಸುವಂತಾಗಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಉತ್ತರ:-

ಸಾರಿಗೆ ಇಲಾಖೆಯಲ್ಲಿ ಕಳೆದ ಎರಡು ವರ್ಷಗಳಿಂದ ಆರ್.ಸಿ ಪುಸ್ತಕ, ಸ್ಮಾರ್ಟ್ ಕಾರ್ಡ್, ಡಿ.ಎಲ್, ಪರ್ಮಿಟ್ ಇತ್ಯಾದಿ ಸೇವೆಗಳನ್ನು ಕೇಂದ್ರ ಸರ್ಕಾರದ ತಂತ್ರಾಂಶಗಳಾಧ VAHAN-4 ಮತ್ತು SARATHI-4 ಗಳ ಮೂಲಕ ಆನ್‌ಲೈನ್ ವ್ಯವಸ್ಥೆಯಲ್ಲಿ ಅರ್ಜಿಗಳನ್ನು ಸ್ವೀಕರಿಸುತ್ತಿದ್ದು ಮತ್ತು ಕಾಲಮಿತಿಯೊಳಗೆ ಸಕಾಲ ಕಾಯ್ದೆಯಡಿ 24 ಸೇವೆಗಳನ್ನೂ ಸಹ ಆನ್‌ಲೈನ್ ಮೂಲಕ ಒದಗಿಸಲಾಗುತ್ತಿದೆ. ಸದರಿ ಸೇವೆಗಳನ್ನು ಒ.ಟಿ.ಪಿ ಆಧಾರದ ಮೂಲಕ ಅರ್ಜಿದಾರರಿಗೆ ನೀಡುತ್ತಿದ್ದು ಇವುಗಳಲ್ಲಿ ಮಧ್ಯವರ್ತಿಗಳ ಪಾತ್ರವನ್ನು ನಿಯಂತ್ರಿಸಲಾಗಿದೆ.

ವಾಹನ ಮಾಲೀಕತ್ವ ವರ್ಗಾವಣೆ, ಸರಕು ಸಾಗಾಣೆ ಪರವಾನಗಿ ಮತ್ತು ಅರ್ಹತಾ (Fitnesss Certificate) ಪ್ರಮಾಣ ಪತ್ರ ನೀಡುವಿಕೆ (ಸಾರಿಗೆ) ಸೇವೆಗಳನ್ನು ಆನ್‌ಲೈನ್ ಮೂಲಕ ನೀಡುವ ಕುರಿತು ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. ಸದರಿ ಆನ್‌ಲೈನ್ ಸೇವೆಗಳ ಆನ್ ಲೈನ್ ಅರ್ಜಿಗಳ ವಿಲೇವಾರಿ ಪ್ರಕ್ರಿಯೆಯ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಅದರ ಕಾರ್ಯಕ್ಷಮತೆಯನ್ನು ಆಧರಿಸಿ ಸದರಿ ಸೇವೆಗಳನ್ನು ಆನ್ ಲೈನ್‌ಗೊಳಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು.

ಸಾರಿಗೆ ಇಲಾಖೆಯಲ್ಲಿ ಅಭ್ಯರ್ಥಿಗಳ ವಾಹನ ಚಾಲನಾ ಪರೀಕ್ಷೆಯನ್ನು ಪಾರದರ್ಶಕ ರೀತಿಯಲ್ಲಿ ನಿರ್ವಹಿಸಲು Sensor Based Automated Driving Track Test ನಲ್ಲಿ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿ ಚಾಲನಾ ಪತ್ರಗಳನ್ನು ಪಡೆಯುತ್ತಿದ್ದು, ರಾಜ್ಯದಲ್ಲಿ ಬೆಂಗಳೂರು (ಎಲೆಕ್ಟ್ರಾನಿಕ್ ಸಿಟಿ), ಚಂದಾಪುರ, ಮೈಸೂರು ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಸದರಿ ಸ್ವಯಂ ಚಾಲಿತ ಪರೀಕ್ಷಾ ಪಥಗಳನ್ನು ನಿರ್ಮಿಸಲಾಗಿದೆ. ವಾಹನಗಳ ತಪಾಸಣೆ ಮತ್ತು ಅರ್ಹತಾ ಪತ್ರ ನೀಡುವಾಗ ವಾಹನಗಳ ತಪಾಸಣೆಯನ್ನೂ Inspection and Certification Center ಅನ್ನೂ ಸಹ ಕಾರ್ಯಗತಗೊಳಿಸಲಾಗಿದೆ.

ರಾಜ್ಯದ ಪ್ರತಿಯೊಂದು ಸಾರಿಗೆ ಕಛೇರಿಗಳಲ್ಲಿ Screen Test Aid for Learner's License (STALL) ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಅಭ್ಯರ್ಥಿಗಳು ನೇರವಾಗಿ ಕಂಪ್ಯೂಟರ್ ಮೂಲಕ ಪರೀಕ್ಷೆಗೆ ಹಾಜರಾಗುತ್ತಿದ್ದು ಪಲಿತಾಂಶದ ನಂತರ ಕೂಡಲೇ ಕಲಿಕಾ ಚಾಲನಾ ಪರವಾನಿಗೆ ಪಡೆಯುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿರುವುದರಿಂದ ಮಧ್ಯವರ್ತಿಗಳನ್ನು ನಿಯಂತ್ರಿಸಲಾಗಿದೆ.

ಸಾರಿಗೆ ಇಲಾಖೆಯಲ್ಲಿ ರಾಜ್ಯದ ಎಲ್ಲಾ ಸಾರಿಗೆ ಕಛೇರಿಗಳಲ್ಲಿ ಎಲ್ಲಾ ಸೇವೆಗಳನ್ನು ಆನ್‌ಲೈನ್ ಮೂಲಕ ನಿರ್ವಹಿಸಲಾಗುತ್ತಿದೆ ಮತ್ತು ಇ-ಆಡಳಿತಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ಅರ್ಜಿದಾರರಿಗೆ ತಮ್ಮ ಸಮೀಪದ ಜನಸ್ನೇಹಿ ಕೇಂದ್ರಗಳಾದ ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್ ಕೇಂದ್ರಗಳಿಗೆ ಭೇಟಿ ನೀಡಿ ಅರ್ಜಿಗಳನ್ನು ಸಲ್ಲಿಸಲು ಹಾಗೂ ಶುಲ್ಕವನ್ನು ಸಹ ಅದೇ ಕೇಂದ್ರಗಳಲ್ಲಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ವಾಹನ ಮಾಲೀಕರಿಗೆ ಮತ್ತು ಸಾರಿಗೆ ಸೇವೆಗಳನ್ನು ಪಡೆಯುವ ಅರ್ಜಿದಾರರಿಗೆ ನೇರವಾಗಿ ತೆರಿಗೆ ಮತ್ತು ಶುಲ್ಕವನ್ನು ಪಾವತಿಸುವ ಇ-ಪೇಮೆಂಟ್ (e-payment) ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು ನೋಂದಣಿ ಮತ್ತು ಚಾಲನಾ ಅನುಜ್ಞಾಪತ್ರಗಳ ಸ್ಮಾರ್ಟ್ ಕಾರ್ಡ್‌ಗಳನ್ನು ನೇರವಾಗಿ ಅರ್ಜಿದಾರರ ವಿಳಾಸಕ್ಕೆ ಆರ್.ಪಿ.ಎ.ಡಿ ಮೂಲಕ ರವಾನಿಸಲಾಗುತ್ತಿದೆ. ಇದರಿಂದ ಅರ್ಜಿದಾರರು ನೇರವಾಗಿ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುತ್ತಿದ್ದು ಮಧ್ಯವರ್ತಿಗಳ ಪಾತ್ರವನ್ನು ಸಾಕಷ್ಟು ನಿಯಂತ್ರಣಕ್ಕೆ ತರಲಾಗಿದೆ.

ಟಿಡಿ 23 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು